# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.02.2018**

***ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ***
***ಪರೀಕ್ಷೆ ಸಿದ್ಧತೆಗಾಗಿ ಆತ್ಮಸ್ಥೈರ್ಯ ನೀಡಿ : ಮಾನ್ಯ ಅಧ್ಯಕ್ಷರು ಶಿಕ್ಷಣ ಸ್ಥಾಯಿ ಸಮಿತಿಯ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ಟಿನ್ ಟೌನ್ ಬಾಲಕಿಯರ ಪ್ರೌಢ ಶಾಲೆ/ಪಿಯುಸಿ ಕಾಲೇಜಿಗೆ ದಿಢೀರ್ ಭೇಟಿ ನೀಡಿ ಮಾನ್ಯ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ಹಾಗೂ ಸದಸ್ಯರೊಂದಿಗೆ ತಪಾಸಣೆ ಮಾಡಲಾಯಿತು. 2017-18ನೇ ಸಾಲಿಗೆ ನೀಡ ಬೇಕಾಗಿದ್ದ ಎಲ್ಲಾ ಮೂಲ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿಗಳನ್ನು ವಿಚಾರಿಸಿದಾಗ ಎಲ್ಲಾ ಮೂಲ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ತಲುಪಿರುವುದಾಗಿ ಮುಖ್ಯೋಪಾಧ್ಯಾಯರು ತಿಳಿಸಿದರು.

ಶಾಲಾ ಅವರಣವು ಸ್ವಚ್ಛವಾಗಿದ್ದು, ಕಟ್ಟಡವು ಬಹಳ ದುಸ್ಥಿತಿಯಲ್ಲಿರುವುದು ಹಾಗೂ ಛಾವಣಿ ಭಾಗದಲ್ಲಿ ಕೆಲವು ಕಡೆ ದುರಸ್ಥಿ ಸ್ಥಿತಿಯಲ್ಲಿರುವುನ್ನು ಕಂಡ ಮಾನ್ಯ ಅಧ್ಯಕ್ಷರು ಈ ಬಗ್ಗೆ ಕಾಮಗಾರಿ ಕಾರ್ಯಕ್ಕೆ ತುರ್ತು ಕ್ರಮವಹಿಸುವುದಾಗಿ ತಿಳಿಸಿದರು. ಮಧ್ಯಾಹ್ನದ ಬಿಸಿ ಊಟದ ವೇಳೆ ವಿದ್ಯಾರ್ಥಿಗಳಿಗೆ ಊಟ ಮಾಡಲು ಶಾಲೆಯ ಆವರಣದಲ್ಲಿ ಮೇಲ್‌ಛಾವಣಿ(Shelter) ಅಳವಡಿಸುವಂತೆ ಶಾಲಾ ಮುಖ್ಯೋಪಾದ್ಯಾಯ ಕೋರಿರುವ ಮೇರೆಗೆ ಸ್ಥಳೀಯ ಸದಸ್ಯರೊಂದಿಗೆ ಮುಂದಿನ ಕಾಮಗಾರಿ ಕಾರ್ಯ ಕೈಗೊಳ್ಳುವುದಾಗಿ ತಿಳಿಸಿದರು.

ಕಾಲೇಜಿಗೆ ಭೇಟಿ ನೀಡಿದ ಸಮಯದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ರವರು ತರಗತಿಗೆ ತೆರಳಿ ಶಿಕ್ಷಕರು ಪಾಠ ಮಾಡುವುದನ್ನು ಕೊಠಡಿಯಲ್ಲಿ ಕೂತು ಆಲಿಸಿದರು. ಕಾಲೇಜಿನ ಪ್ರಾಂಶುಪಾಲರು ಮುಂದಿನ ದಿನಗಳಲ್ಲಿ ಪದವಿ ಕಾಲೇಜು ತೆರೆಯುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದ ಹಿನ್ನಲೆಯಲ್ಲಿ ಅಗತ್ಯಕ್ರಮ ವಹಿಸುವುದಾಗಿ ಸೂಚಿಸಿದರು.

ತದನಂತರ, ಬಿಬಿಎಂಪಿ ಆಸ್ಟಿನ್ ಟೌನ್ ಬಾಲಕರ ಪ್ರೌಢಶಾಲೆಗೆ ಭೇಟಿ ನೀಡಿದರು. ಶಾಲಾ ಆವರಣವು ಸ್ವಚ್ಛವಾಗಿದ್ದು, ಕಟ್ಟಡವು ಉತ್ತಮ ಸ್ಥಿತಿಯಲ್ಲಿ ಇರುವುದಾಗಿ ಮಾನ್ಯ ಅಧ್ಯಕ್ಷರು ಬಹಳ ಸಂತೋಷ ವ್ಯಕ್ತ ಪಡಿಸಿದರು.

ನಂತರ ಮಾನ್ಯ ಅಧ್ಯಕ್ಷರು ಶಿಕ್ಷಣ ಸ್ಥಾಯಿ ಸಮಿತಿಯ ಸದಸ್ಯರೊಂದಿಗೆ ಬಿಬಿಎಂಪಿ ಆಸ್ಟಿನ್ ಟೌನ್ ಬಾಲಕಿಯರ ಹಾಗೂ ಬಾಲಕರ ಪ್ರೌಢಶಾಲೆ ಮತ್ತು ಪಿ.ಯು.ಸಿ ಕಾಲೇಜಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಿದ್ದತೆಗಾಗಿ ಕೌನ್ಸಿಲಿಂಗ್ ಮಾಡಿ ಆತ್ಮಸ್ಥೈರ್ಯ ನೀಡಿ ಪರೀಕ್ಷೆಗಳನ್ನು ಎದುರಿಸಲು ಧೈರ್ಯವನ್ನು ತುಂಬಿ, ವಿದ್ಯಾರ್ಥಿಗಳ ಪೂರ್ವ ಸಿದ್ದತೆ ಬಗ್ಗೆ ಮಾಹಿತಿ ನೀಡಲಾಯಿತು.

**ಸಾರ್ವಜನಿಕ ಸಂಪರ್ಕಾಧಿಕಾರಿ**